ಕಾಡು ಹಂದಿಗಳಿಂದ ಏನು ಬೆಳೆಗಳು ನಾಶವಾಗುತ್ತಿವೆ ಅದಕ್ಕೆ ಇಲ್ಲಿಯವರೆಗೂ ಬೀದರ್ ತಾಲ್ಲೂಕಿನಲ್ಲಿ ಮೂರು ದೂರುಗಳು ಬಂದಿವೆ, ಬಸವಕಲ್ಯಾಣ ತಾಲ್ಲೂಕಿನಿಂದ ಒಂದು ದೂರು ಬಂದಿದೆ. ಅದಕ್ಕೆ ಅರಣ್ಯ ಇಲಾಖೆಯವರು ಗಡಿಭಾಗದಲ್ಲಿ ಮುಳ್ಳು ಬೇಲಿಯನ್ನು ನಿರ್ಮಾಣ ಮಾಡಿ ಅವುಗಳನ್ನು ತಡೆಹಿಡಿಯುವ ಪ್ರಯತ್ನ ಮಾಡಿದ್ದಾರೆ. ಈಗ ದೇವರಾವ್ ತಂದೆ ಬಡವಂತರಾವ್ ಎನ್ನುವಂಥ ಕಾಶಂಪೂರ್ ಗ್ರಾಮದವರಿಗೆ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಈಗಾಗಲೇ ಕೊಟ್ಟಿದ್ದೇವೆ. ಬೇರೆ ಕಡೆಯಲ್ಲಿ ಗಾಯಗೊಂಡಿರತಕ್ಕಂಥವರಿಗೆ 13 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ. ಈ ಪರಿಹಾರ ಸರಿಯಾದುದ್ದಲ್ಲ. ಸೂಕ್ತವಾದುದ್ದಲ್ಲವೆಂದು ಹೇಳಿದ್ದಾರೆ. ಅದನ್ನೂ ಕೂಡ ಸರ್ಕಾರ ಪರಿಶೀಲಿಸಿ, ಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : 19 ಸಾವಿರ ರೂ. ಏನು ಕೊಡುತ್ತಾ ಇದ್ದಾರೆ. ಅದು ಬಹಳ ಕಡಿಮೆ ಇದೆ. ತೋಳದಿಂದ ಸಾಯುವವರಿಗೆ ಸ್ವಲ್ಪ ಜಾಸ್ತಿ ಮಾಡಬೇಕೆಂದು ಹೇಳುತ್ತಿದ್ದೇವೆ. ಮಾನ್ಯ ರಾಯರೆಡ್ಡಿಯವರು ಹೇಳಿದ್ದು ಸರಿ. ಊರ ಹಂದಿಗಳಿಂದಲೂ ತೊಂದರೆಯಾಗಿದೆ. ಹಿಂದೆ ಸಂಡಾಸ್ ಕಟ್ಟಿಲ್ಲ; ಹಂದಿ ಸಾಕಬೇಕೆಂದು ಹೇಳುತ್ತಿದ್ದರು. ಈಗ ಸಂಡಾಸ್ ಕಟ್ಟಿರುತ್ತಾರೆ. ಹಂದಿ ಬೇಕಾಗಿಲ್ಲ. ಅಂದರೆ ಉಲ್ಟಾ ಆಗಿದೆ. ಅದಕ್ಕಾಗಿ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಾ ಇದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಹಿಂದೆ ಅರಣ್ಯ ಸಚಿವರಾಗಿದ್ದರು. ಇಡೀ ರಾಜ್ಯದಲ್ಲಿರತಕ್ಕ ಹಂದಿಗಳನ್ನೆಲ್ಲಾ ಆ ಕಡೆಗೇ ತೆಗೆದುಕೊಂಡು ಹೋಗಿದ್ದಾರೋ ಏನೋ.

ಶ್ರೀ ಬಸವರಾಜ ರಾಯರೆಡ್ಡಿ : ಅವರು ಅರಣ್ಯ ಸಚಿವರಾಗಿದ್ದಾಗ ಹಂದಿಗಳನ್ನು ಕಂಟ್ರೋಲ್ ಮಾಡಿದ್ದರು. ಈಗ ಮತ್ತೆ ಕಂಟ್ರೋಲ್ ಮಾಡಲಿ ಎಂದು ಹೇಳುತ್ತಿದ್ದಾರೆ.

ಮಾನ್ಯ ಸದಸ್ಯರು : ಅಧ್ಯಕ್ಷರೇ, ಈ ಹಂದಿಗಳ ಸಂತಾನೋತ್ಪತ್ತಿ ತುಂಬಾ ಇದೆ. ಇದನ್ನು ಕಂಟ್ರೋಲ್ ಮಾಡಬೇಕೆಂಬುದು ನನ್ನ ಮನವಿ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಆಶ್ರಯ ಹಾಗೂ ಅಂಬೇಡ್ಕರ್ ಯೋಜನೆಯ ಮನೆಗಳು

84 (66): ಶ್ರೀ ಪ್ರಭಾಕರ ಬಂಗೇರ (ಬೆಳ್ತಂಗಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಐದು ವರ್ಷಗಳಿಂದ ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಗಳಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ? (ಕ್ಷೇತ್ರವಾರು ಮಾಹಿತಿ ನೀಡುವುದು)?

ಆ) ಈ ಯೋಜನೆಯಡಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದ ಮನೆಗಳ ಸಂಖ್ಯೆ ಎಷ್ಟು?

ಇ) ಪೂರ್ಣಗೊಂಡಿರುವ ಮನೆಗಳ ಸಂಖ್ಯೆ ಎಷ್ಟು? ಹಾಗೂ ಅಪೂರ್ಣಗೊಂಡಿರುವ ಮನೆಗಳ ಸಂಖ್ಯೆ ಎಷ್ಟು?

ಈ) ಅಪೂರ್ಣಗೊಂಡಿರುವ ಮನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಕಳೆದ ಐದು ವರ್ಷಗಳಿಂದ ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಗಳಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 14825 ಮನೆಗಳು ಮತ್ತು ಉಡುಪಿ ಜಿಲ್ಲೆಗಳಲ್ಲಿ 9404 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ವಿವರ ಕೆಳಗಿನಂತಿದೆ:

ದಕ್ಷಿಣ ಕನ್ನಡ ಜಿಲ್ಲೆ

ವಿಧಾನಸಭಾ ಕ್ಷೇತ್ರ	ಗ್ರಾಮೀಣ ಆಶ್ರಯ	ನಗರ ಆಶ್ರಯ	ಗ್ರಾಮೀಣ ಅಂಬೇಡ್ಕರ್	ನಗರ ಅಂಬೇಡ್ಕರ್	ಒಟ್ಟು
ಮಂಗಳೂರು	–	94	–	42	136
ಉಳ್ಳಾಲ	819	635	47	39	1540
ಸುರತ್ಕಲ್	808	220	43	10	1081
ಮೂಡುಬಿದ್ರೆ	1017	415	69	168	1669
ಬಂಟ್ವಾಳ	1527	346	137	23	2033
ವಿಟ್ಲ	1605	311	121	45	2082
ಪುತ್ತೂರು	1429	319	270	86	2104
ಸುಳ್ಯ	1375	139	296	96	1906
ಬೆಳ್ತಂಗಡಿ	1832	134	271	37	2274
ಒಟ್ಟು	**10412**	**2613**	**1254**	**546**	**14825**

ಉಡುಪಿ ಜಿಲ್ಲೆ

ವಿಧಾನಸಭಾ ಕ್ಷೇತ್ರ	ಗ್ರಾಮೀಣ ಆಶ್ರಯ	ನಗರ ಆಶ್ರಯ	ಗ್ರಾಮೀಣ ಅಂಬೇಡ್ಕರ್	ನಗರ ಅಂಬೇಡ್ಕರ್	ಒಟ್ಟು
ಬೈಂದೂರು	1419	–	126	1997ನೇ	1545
ಕುಂದಾಪುರ	1340	60	152	ಸಾಲಿನಿಂದ	1552
ಬ್ರಹ್ಮಾವರ	1228	100	130	ಯಾವುದೇ	1458
ಉಡುಪಿ	733	513	111	ಗುರಿಯನ್ನು	1357
ಕಾಪು	1220	–	95	ನೀಡಿರುವುದಿಲ್ಲ.	1315
ಕಾರ್ಕಳ	1607	221	349		2177
ಒಟ್ಟು	**7547**	**894**	**963**		**9404**

ಆ) ಮತ್ತು ಇ) ಆಶ್ರಯ, ಅಂಬೇಡ್ಕರ್ ಯೋಜನೆಗಳಡಿಯಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ಮನೆಗಳು, ಪೂರ್ಣಗೊಂಡ ಮನೆಗಳು ಮತ್ತು ಅಪೂರ್ಣಗೊಂಡಿರುವ ಮನೆಗಳ ವಿವರ ಕೆಳಗಿನಂತಿದೆ:

ದಕ್ಷಿಣ ಕನ್ನಡ ಜಿಲ್ಲೆ

ಯೋಜನೆ	ನಿರ್ಮಿಸಲು ಉದ್ದೇಶಿಸಿದ ಮನೆಗಳ ಸಂಖ್ಯೆ	ಪೂರ್ಣಗೊಂಡಿರುವ ಮನೆಗಳ ಸಂಖ್ಯೆ	ಅಪೂರ್ಣಗೊಂಡಿರುವ ಮನೆಗಳ ಸಂಖ್ಯೆ
ಗ್ರಾಮೀಣ ಆಶ್ರಯ	14465	10412	4053
ನಗರ ಆಶ್ರಯ	2723	2613	110
ಗ್ರಾಮೀಣ ಅಂಬೇಡ್ಕರ್	1583	1254	329
ನಗರ ಅಂಬೇಡ್ಕರ್	554	546	8
ಒಟ್ಟು	**19330**	**14825**	**4500**

ಉಡುಪಿ ಜಿಲ್ಲೆ

ಯೋಜನೆ	ನಿರ್ಮಿಸಲು ಉದ್ದೇಶಿಸಿದ ಮನೆಗಳ ಸಂಖ್ಯೆ	ಪೂರ್ಣಗೊಂಡಿರುವ ಮನೆಗಳ ಸಂಖ್ಯೆ	ಅಪೂರ್ಣಗೊಂಡಿರುವ ಮನೆಗಳ ಸಂಖ್ಯೆ
ಗ್ರಾಮೀಣ ಆಶ್ರಯ	11160	7547	3613
ನಗರ ಆಶ್ರಯ	912	894	18
ಗ್ರಾಮೀಣ ಅಂಬೇಡ್ಕರ್	1197	963	234
ನಗರ ಅಂಬೇಡ್ಕರ್	1997ನೇ ಸಾಲಿನಿಂದ ಯಾವುದೇ ಗುರಿಯನ್ನು ನೀಡಿರುವುದಿಲ್ಲ.		
ಒಟ್ಟು	**13269**	**9404**	**3865**

ಈ) ಉಡುಪಿ ಜಿಲ್ಲೆಯಲ್ಲಿ ಅಪೂರ್ಣಗೊಂಡಿರುವ 4500 ಮನೆಗಳ ಪೈಕಿ ಒಟ್ಟು 3219 ಮನೆಗಳು 2003–04ನೇ ಸಾಲಿಗೆ ಸೇರಿದ್ದು, ಇದೀಗ ನೋಂದಣಿ ಕಾರ್ಯ ನಡೆಯುತ್ತಿದೆ.

ಇದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಪೂರ್ಣಗೊಂಡಿರುವ 3865 ಮನೆಗಳ ಪೈಕಿ ಒಟ್ಟು 1813 ಮನೆಗಳು 2003–04ನೇ ಸಾಲಿಗೆ ಸೇರಿದ್ದು, ಇದೀಗ ನೋಂದಣಿ ಕಾರ್ಯ ನಡೆಯುತ್ತಿದೆ. ನೋಂದಣಿ ಕಾರ್ಯವನ್ನು ಪೂರ್ಣಗೊಂಡ ನಂತರ ಮನೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭವಾಗುವುದು.

ಸಧ್ಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆಗಾಲ ಇರುವುದರಿಂದ ಮನೆಗಳ ಕಟ್ಟುವಿಕೆ ಕುಂಠಿತಗೊಂಡಿದೆ. ಮಳೆಗಾಲ ಮುಗಿದ ನಂತರ ಮನೆಗಳ ಕಟ್ಟುವಿಕೆ ಜುರುಕುಗೊಳಿಸಿ ಸಾಧ್ಯವಾದಷ್ಟು ಬೇಗನೆ ಪೂರ್ತಿಗೊಳಿಸಲಾಗುವುದು.

ಶ್ರೀ ಕೆ. ಪ್ರಭಾಕರ ಬಂಗೇರ : ಸನ್ಮಾನ್ಯ ಸಭಾಧ್ಯಕ್ಷರೇ, ಅಪೂರ್ಣವಾಗಿರುವಂಥ ಮನೆಗಳು 4,500 ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿವೆ. ಅವುಗಳನ್ನು ಆದಷ್ಟು ಬೇಗ ಪೂರ್ಣಮಾಡುತ್ತೇವೆಂಬ ಭರವಸೆಯನ್ನೂ ಕೂಡ ಕೊಟ್ಟಿದ್ದಾರೆ. ಇಲ್ಲಿ ಕೆಲವು ಮನೆಗಳಿಗೆ

ಕೊಟ್ಟಿರುವಂಥ 20 ಸಾವಿರ ಏನಿದೆ, ಅದು ಕಡಿಮೆಯಾಗುತ್ತದೆ. ಕೊನೇಪಕ್ಷ 30 ಸಾವಿರ ರೂಪಾಯಿಗಳನ್ನಾದರೂ ಸರ್ಕಾರ ಮನೆ ಕಟ್ಟಿಸಲಿಕ್ಕೆ ಒದಗಿಸಿಕೊಡಬೇಕು. ಮತ್ತು ಬಡ್ಡಿದರ 11ರ ಬದಲು ಶೇಕಡ 6ರ ಪ್ರಕಾರದಲ್ಲಿ ಗ್ರಾಮೀಣ ಕುಟುಂಬದವರು ಇರುವಂಥ ಪ್ರದೇಶವಾಗಿರುವುದರಿಂದ, ಅದನ್ನು ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಈಗಾಗಲೇ ಮನೆ ಕಟ್ಟುವ ಮೊದಲೇ ನೊಂದಾವಣೆ ಆಗಬೇಕೆಂದು ಹೇಳುತ್ತಾ ಇದ್ದಾರೆ. ಇದರಿಂದ ಮನೆ ಕಟ್ಟುವ ಕೆಲಸಕಾರ್ಯಗಳು ಸ್ಥಗಿತಗೊಳ್ಳುವಂಥಾದ್ದು ಇದೆ. ಅದನ್ನೂ ಕೂಡ ಸರಳೀಕರಣ ಮಾಡಬೇಕೆಂದು ನನ್ನ ಒತ್ತಾಯ ಇದೆ. ಹಾಗೆಯೇ ಆಶ್ರಯ ಸಮಿತಿಗಳ ಮೂಲಕ ಇಷ್ಟರವರೆಗೆ ಮನೆ ವಿತರಣೆಯಾಗುತ್ತಾ ಇತ್ತು. ಇದನ್ನು ಬದಲಾವಣೆ ಮಾಡಿದ್ದಾರೆಂಬುದು ನನ್ನ ಗಮನಕ್ಕೆ ಬಂದಿದೆ. ಆಶ್ರಯ ಸಮಿತಿಗಳನ್ನು ಇನ್ನುಮುಂದೆ ಮಾಡುತ್ತಾರೋ ಇಲ್ಲವೋ ಎಂಬುದನ್ನೂ ಕೂಡ ಈ ಒಂದು ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಉತ್ತರದಲ್ಲಿ ಹೇಳಿದಂತೆ 14,825 ಮನೆಗಳಲ್ಲಿ ಉಡುಪಿ ಜಿಲ್ಲೆಯಲ್ಲಿ 9,400 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 14,825 ಮನೆಗಳನ್ನು ಮಾಡಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಅಪೂರ್ಣಗೊಂಡ ಮನೆಗಳು 4,500 ಮನೆಗಳ ಪೈಕಿ 3219 ಇದೆ. ಅದೇರೀತಿ ದಕ್ಷಿಣ ಕನ್ನಡ ಜಿಲ್ಲೆಯ ಅಪೂರ್ಣಗೊಂಡಿರುವ ಮನೆಗಳಲ್ಲಿ 3865 ಮನೆಗಳ ಪೈಕಿ 1813 ಮನೆಗಳು 2003–04ನೇ ಸಾಲಿಗೆ ಸೇರಿರತಕ್ಕಂಥಾದ್ದಾಗಿದೆ. ನೊಂದಾಣಿಕೆ ಕಾರ್ಯವನ್ನು ನಾವು ಮಾಡಲೇಬೇಕಾಗುತ್ತದೆ. ಅದರಲ್ಲಿ ಇನ್ನೂ ಸರಳೀಕರಣ ಮಾಡಬೇಕೆನ್ನುವುದಾಗಿದ್ದರೆ ಆ ಸರಳೀಕರಣಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ, ನೊಂದಣಿಯನ್ನು ಮಾಡಿದ ನಂತರ ಕೆಲಸ ಆಗುತ್ತದೆ. ವಿಳಂಬವಾಗಿರತಕ್ಕಂಥಾದ್ದು ಈ ಕಾರಣಕ್ಕೇ ಅಲ್ಲ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಮಳೆ ಇರತಕ್ಕಂಥ ಕಾರಣಕ್ಕಾಗಿ ಕೂಡ ಈ ಮನೆ ಕಟ್ಟುವಂಥ ಕಾರ್ಯಕ್ರಮ ಮತ್ತು ಈ ಯೋಜನೆ ಸ್ವಲ್ಪ ಕುಂಠಿತಗೊಂಡಿದೆ. ಮಳೆಗಾಲ ನಿಂತುಹೋದಮೇಲೆ ಅದನ್ನು ಚುರುಕುಗೊಳಿಸಲಾಗುತ್ತದೆ. ಅವರು ಹೇಳಿದಂತೆ, ಆಶ್ರಯ ಸಮಿತಿ ಇರುತ್ತದೆ. ಚುನಾವಣೆಯ ಸಂದರ್ಭದಲ್ಲಿ ಆಶ್ರಯ ಸಮಿತಿ, ಆ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ ಅದಾಗಲಿಲ್ಲ. ಆದ್ದರಿಂದ, ಈಗ ಅದನ್ನು ಚುರುಕುಗೊಳಿಸಿ, ಆ ಕಾರ್ಯಕ್ರಮವನ್ನು ಮುಂದುವರಿಸುತ್ತೇವೆ.

ಶ್ರೀ ಕೆ. ಪ್ರಭಾಕರ ಬಂಗೇರ : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಕೇಳಿದ ಮತ್ತೊಂದು ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಇವತ್ತು 20 ಸಾವಿರ ರೂಪಾಯಿಗಳಿಗೆ ಮನೆ ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ 35 ಸಾವಿರ ರೂಪಾಯಿಗಳನ್ನಾದರೂ ಕೊಡಬೇಕು. ಶೇಕಡ 6ರ ಬಡ್ಡಿ ದರದಲ್ಲಿಯಾದರೂ ಕೊಟ್ಟರೆ ಯಾರು ಫಲಾನುಭವಿ ಇದ್ದಾನೆ, ಅವ ಕಟ್ಟಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಶೇಕಡ 11ರ ಬಡ್ಡಿ ದರದಲ್ಲಿ ಅವನಿಗೆ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಈಗಾಗಲೇ ಇಲ್ಲಿಯವರೆಗೆ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಶನ್‌ನವರಿಗೆ ಶೇಕಡ 10 ರ ಬಡ್ಡಿಯಂತೆ ಅವರು ತೆಗೆದುಕೊಳ್ಳುತ್ತಿದ್ದರು. ಆದ್ದರಿಂದ,

ಒಂದು ಪರ್ಸೆಂಟ್ ಬಡ್ಡಿಯನ್ನು ಹ್ಯಾಂಡ್ಲಿಂಗ್ ಚಾರ್ಜಸ್ ಆಗಿ ಹಾಕಿ, 11 ಪರ್ಸೆಂಟ್ ಬಡ್ಡಿಯನ್ನು ಈ ಫಲಾನುಭವಿಗಳ ಮೇಲೆ ಹಾಕುತ್ತಿದ್ದರು. ಈಗ ಅದು ಕಡಿಮೆಯಾಗಿ 8 ಪರ್ಸೆಂಟ್ ಬಡ್ಡಿಗೆ ಕೊಡಬೇಕೆಂಬ ಪ್ರಸ್ತಾವ ಕೂಡ ಇದೆ. ಅದು ಆದಾಗ 9 ಪರ್ಸೆಂಟ್ ಬಡ್ಡಿ ಆಗುತ್ತದೆ. ಇದರಲ್ಲಿ 10 ಸಾವಿರ ರೂಪಾಯಿಗಳು ಸಾಲ, ಇನ್ನುಳಿದ 10 ಸಾವಿರ ರೂಪಾಯಿಗಳನ್ನು ಮರುಪಾವತಿ ಮಾಡಬೇಕು. ಪಂಚಾಯತ್‌ರಾಜ್ ಕಾನೂನು ಕೆಳಗೆ ಗ್ರಾಮಸಭೆಗಳಲ್ಲಿ ಫಲಾನುಭವಿಗಳು ಯಾರೆಂದು ನಿರ್ಧಾರ ಮಾಡಬೇಕಾಗುತ್ತದೆ. ಇದಕ್ಕೇನೂ ಸರ್ಕಾರಿ ಆಜ್ಞೆ ಮಾಡಿಲ್ಲ. ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಭೆ ಇರುತ್ತದೆ.

11.20 ಎ ಎಂ

ಫಲಾನುಭವಿಗಳನ್ನು ಆಯ್ಕೆ ಮಾಡಿ ಗ್ರಾಮಸಭೆಗಳಿಗೆ ಕಳುಹಿಸಿಕೊಟ್ಟ ಮೇಲೆ ಬಡತನ ಸೀಮಾರೇಖೆ ಕೆಳಗಿರತಕ್ಕಂಥವರು ಮತ್ತು ಇದಕ್ಕೆ ಸಮೀಕ್ಷೆ ಮಾಡಿರತಕ್ಕಂಥ ಯಾದಿ (ಪಟ್ಟಿ) ಗ್ರಾಮೀಣ ಮಟ್ಟದಲ್ಲಿರತಕ್ಕಂಥಾದ್ದು, ಮತ್ತು ಪಂಚಾಯಿತಿ ಮಟ್ಟದಲ್ಲಿದೆ. ಅದರಲ್ಲಿ ಬಂದಿರತಕ್ಕಂಥ ಮತ್ತು ಯಾದಿಯಲ್ಲಿ ಬಂದಿರತಕ್ಕಂಥ ಜನಗಳಿಗೆ ಗ್ರಾಮಸಭೆ ಶಿಫಾರಸ್ಸು ಮಾಡಿರತಕ್ಕಂಥಾದ್ದನ್ನು ಪರಿಗಣಿಸಿ ಶಾಸಕರ ಅಧ್ಯಕ್ಷತೆಯಲ್ಲಿರುವಂತಹ ಆಶ್ರಯ ಯೋಜನೆ ಮನೆಗಳನ್ನು ವಿತರಣೆ ಮಾಡಬೇಕಾಗುತ್ತದೆ. ಅದನ್ನು ನಾವು ನಿಖರವಾಗಿ ಪಾಲನೆ ಮಾಡಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೇ, ಮನೆಗಳು ಏನಿವೆ ಆ ಮನೆಗಳನ್ನು ಈಗಾಗಲೇ ಗ್ರಾಮ ಪಂಚಾಯತಿಗಳ ಮೂಲಕವಾಗಿ ಹಣವನ್ನು ಕೊಡುವಂತಹ ವ್ಯವಸ್ಥೆ ಮಾಡಿದಾಗ ಜನರಿಗೆ ಅನುಕೂಲವಾಗುತ್ತದೆ. ಅವರು ತಾಲ್ಲೂಕು ಪಂಚಾಯತಿ ಆಫೀಸ್‌ಗೆ ಬಂದು ಅಲೆದಾಡುವಂತಹ ಪರಿಸ್ಥಿತಿ ಕಡಿಮೆಯಾಗುತ್ತದೆ. ಗ್ರಾಮ ಪಂಚಾಯತಿಗಳ ಮೂಲಕವೇ ಆ ಮನೆಗಳಿಗೆ ಕೊಡುವಂತಹ ಹಣವನ್ನು ಕೊಟ್ಟಾಗ ಆ ಫಲಾನುಭವಿಗಳಿಗೆ ಅನುಕೂಲವಾಗುತ್ತದೆ. ಅದನ್ನು ಮಾಡಿಕೊಡಬೇಕೆಂದು ನಾನು ಈ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಸರ್ಕಾರ ಇದನ್ನು ಪರಿಗಣಿಸುತ್ತದೆ. ಹಾಗೂ ಪರಿಶೀಲಿಸುತ್ತದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ನಗರ ಪ್ರದೇಶಗಳಲ್ಲಿ ಬರುವ ಮನೆಗಳಿಗೆ 50 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ಸಿಮೆಂಟ್‌ಗೆ ಸಂಬಂಧಪಟ್ಟ ಹಾಗೆ ಈಗಾಗಲೇ ತೆರಿಗೆ 5 ಪರ್ಸೆಂಟ್ ಹೆಚ್ಚಳವಾಗಿರುವುದರಿಂದ ಒಟ್ಟಾರೆ 10 ಪರ್ಸೆಂಟ್‌ಗಿಂತ ಹೆಚ್ಚು ಕನ್‌ಸ್ಟ್ರಕ್ಷನ್ ಕಾಸ್ಟ್ ಜಾಸ್ತಿ ಬರುವುದರಿಂದ....

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಸಿಮೆಂಟ್ ಹೆಚ್ಚಳವಾಗಿಲ್ಲ. ಸಿಮೆಂಟ್‌ಗೆ 16 ಪರ್ಸೆಂಟ್ ಬೇಸಿಕ್ ರೇಟ್ ಇತ್ತು. 5 ಪರ್ಸೆಂಟ್ ಎಂಟ್ರಿ ಟ್ಯಾಕ್ಸ್ ಇತ್ತು. ಎಫೆಕ್ಟೀವ್ ರೇಟ್ ಎಷ್ಟು ಇತ್ತು ಅಂದರೆ 21 ಪರ್ಸೆಂಟ್‌ಗೆ ಆಗಿತ್ತು. ನಾವು ಆ ಎಂಟ್ರಿ ಟ್ಯಾಕ್ಸ್‌ನ್ನು ತೆಗೆದು ಹಾಕಿ ಬೇಸಿಕ್ ರೇಟ್‌ನ್ನು 16 ರಿಂದ 20 ಪರ್ಸೆಂಟ್‌ಗೆ ಏರಿಸಿದ್ದೇವೆ. ಇದರಿಂದ ಒಂದು ಪರ್ಸೆಂಟ್ ಕಡಿಮೆಯಾಗಿದೆಯೇ ಹೊರತು ಸಿಮೆಂಟ್‌ಗೆ ಬೆಲೆ ಹೆಚ್ಚಾಗಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗಾಗಲೇ 15 ರೂಪಾಯಿ ಹೆಚ್ಚು ಮಾರಾಟ ಮಾಡುತ್ತಿದ್ದಾರೆ. ತಾವು ವರದಿ ತರಿಸಿ.

ಶ್ರೀ ಎನ್. ಯೋಗೀಶ್ ಭಟ್ : ಕನ್‌ಸ್ಟ್ರಕ್ಷನ್ ಕಾಸ್ಟ್ 10 ಪರ್ಸೆಂಟ್ ಜಾಸ್ತಿಯಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಹೊಸ ತೆರಿಗೆ ಜಾರಿಗೆ ಬರುವುದು ಆಗಸ್ಟ್ ಒಂದನೇ ತಾರೀಖಿನಿಂದ. ಈಗ ಮಾರಾಟ ಮಾಡುವುದಕ್ಕೆ ಬರುವುದಿಲ್ಲ. ಅದು ಸರಿಯಲ್ಲ. ಆ ರೀತಿ ಮಾರಾಟ ಮಾಡುತ್ತಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾವುದೇ ರೀತಿಯ ಹೊಸ ರೇಟ್‌ಗಳನ್ನು ಮಾಡಿದಾಗ ಬಜೆಟ್ ಅಪ್ರೂವ್ ಆಗಬೇಕು. ಇಲ್ಲಿ ಬಜೆಟ್ ಅಪ್ರೂವ್ ಆಗಿಲ್ಲ. ಬಜೆಟ್ ಅಪ್ರೂವ್ ಆದ ಮೇಲೆ ತಾನೆ ಅದು ಎಫೆಕ್ಟ್‌ಗೆ ಬರುವುದು? ಆಗಸ್ಟ್ ಒಂದನೇ ತಾರೀಖಿನಿಂದ ಬರಬೇಕು. ಈಗ ಆ ತರಹ ಏನಾದರೂ ಮಾಡುತ್ತಿದ್ದರೆ ಅದು ತಪ್ಪು, ಅಕ್ರಮವಾಗಿ ಜನರಿಗೆ ಮೋಸ ಮಾಡುತ್ತಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಏರಿಸಿರುವ ಪಟ್ಟಿಯಲ್ಲಿ ಸಿಮೆಂಟ್ ಇದೆ. 4 ಪರ್ಸೆಂಟ್‌ನಿಂದ 8 ಪರ್ಸೆಂಟ್ ಅಂತ ಇದೆ. ಹಾಗಾಗಿ 16 ರಿಂದ 20 ಪರ್ಸೆಂಟ್ ಅಂತ ಸ್ಪಷ್ಟವಾಗಿದೆ.

ಶ್ರೀ ಸಿದ್ದರಾಮಯ್ಯ : ಬೇಸಿಕ್ ರೇಟ್ ಮೊದಲು 16 ಪರ್ಸೆಂಟ್ ಇತ್ತು. ಅದರ ಮೇಲೆ 5 ಪರ್ಸೆಂಟ್ ಎಂಟ್ರಿ ಟ್ಯಾಕ್ಸ್ ಇತ್ತು. ಒಟ್ಟು 21 ಪರ್ಸೆಂಟ್ ಆಗುತ್ತಿತ್ತು. ಇದು ಎಫೆಕ್ಟೀವ್ ರೇಟ್. ಈಗ ನಾವು 5 ಪರ್ಸೆಂಟ್ ಎಂಟ್ರಿ ಟ್ಯಾಕ್ಸ್ ತೆಗೆದು ಹಾಕಿದ್ದೇವೆ. 16 ಪರ್ಸೆಂಟ್ ಬೇಸಿಕ್ ರೇಟ್ ಏನು ಇತ್ತು ಅದು 20 ಪರ್ಸೆಂಟ್‌ಗೆ ಹೋಗಿದೆ. ಮೊದಲು 21 ಪರ್ಸೆಂಟ್ ಆಗುತ್ತಿತ್ತು. ಈಗ ಅದು 20 ಪರ್ಸೆಂಟ್ ಆಗುತ್ತದೆ. ಒಂದು ಪರ್ಸೆಂಟ್ ಕಡಿಮೆಯಾಗುತ್ತದೆ. ಹೆಚ್ಚೇನೂ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸಾಕಷ್ಟು ಹಿರಿಯ ಸಚಿವರಾಗಿರುವುದರಿಂದ ತಮಗೆ ಸಾಧ್ಯವಾದರೆ ಮಾಡಿ. ಎಲ್ಲರ ಅಭಿಪ್ರಾಯ ಸಹ ಅದೇ ಆಗಿದೆ. ಈಗ 20 ಸಾವಿರಕ್ಕೆ ಮನೆ ಕಟ್ಟಲು ಸಾಧ್ಯವಾಗುವುದಿಲ್ಲ. ಬೆಲೆ ಜಾಸ್ತಿ ಆಯಿತು. ಅದು ಎಲ್ಲರಿಗೂ ಗೊತ್ತಿರುವ ವಿಚಾರ. ಆ 20 ಸಾವಿರ ರೂಪಾಯಿಗಳಲ್ಲಿ ಕಟ್ಟುವ ಮನೆಗೆ ಒಂದು ರೂಮ್ ಒಂದು ಹಾಲ್ ಇರುತ್ತದೆ. ಅಡುಗೆ ಮನೆ, ಸ್ನಾನದ ಮನೆ ಅಲ್ಲಿಯೇ, ಮತ್ತೆ ಇರುವ 8-10 ಜನ ಒಂದು ಹಾಲ್‌ನಲ್ಲಿ ಮಲಗಿಕೊಳ್ಳುತ್ತಾರೆ. ಒಂದು ರೂಮ್ ಎಕ್ಸ್‌ಟ್ರಾ ಮಾಡುವುದಾದರೆ ಅಟ್‌ಲಿಸ್ಟ್ ಅದನ್ನು 35-40 ಸಾವಿರ ರೂಪಾಯಿಗಳಿಗೆ ಏರಿಸಿದರೆ ಅನುಕೂಲವಾಗುತ್ತದೆ. ಇದು ಮೊದಲನೆಯ ಪ್ರಶ್ನೆ. ಎರಡನೆಯದು ದಯಮಾಡಿ ತಾವು ಪರಿಶೀಲನೆ ಮಾಡಿ. ಎಲ್ಲಾ ಶಾಸಕರ ಅನುಭವ, ಇವತ್ತು ಹಣ ಬಿಡುಗಡೆಯಾಗಿಲ್ಲ. ಅರ್ಧಂಬರ್ಧ ಆಗಿದೆ. ಎಲ್ಲಾ ಕಡೆ ಮನೆ ಬೀಳುವಂತಹ ಸ್ಥಿತಿಗೆ ಬಂದಿದೆ. ಹಣ ತಕ್ಷಣ ಬಿಡುಗಡೆ ಮಾಡಿ ಹಣ ಕೊಡಿಸುತ್ತೀರಾ ಮತ್ತು ಹಣ ಜಾಸ್ತಿ ಕೊಡುವುದಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಿ ಪ್ರಯತ್ನ ಮಾಡುತ್ತೀರಾ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ.....

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಎಲ್ಲಾ ಕ್ಷೇತ್ರಗಳಲ್ಲಿಯೂ ಒಂದು ಗೋಳು ಇದೆ. ಹಿಂದಿನ ಅಧಿವೇಶನದಲ್ಲಿ ಮಾನ್ಯ ಸಚಿವರು ಹೇಳಿದರು. ಆ ರಿಜಿಸ್ಟ್ರೇಷನ್ ಡೇಟನ್ನು ಎಕ್ಸ್‌ಟೆಂಡ್

ಮಾಡುತ್ತೇನೆಂದು. ದಿನಾಂಕ 22ಕ್ಕೆ ಒಂದು ಸುತ್ತೋಲೆ ಬಂದಿದೆ. 30ನೇ ತಾರೀಖಿನೊಳಗೆ ರಿಜಿಸ್ಟ್ರೇಷನ್ ಮುಗಿಸಿ ಕಳುಹಿಸಿ ಅಂತ. ನಮ್ಮ ಮಲೆನಾಡು ತಾಲ್ಲೂಕುಗಳಲ್ಲಿ ಅಷ್ಟು ಬೇಗ ಮಾಡುವುದಕ್ಕೆ ಆಗುವುದಿಲ್ಲ. ಇನ್ನೊಂದು ಏನಾಗಿದೆ ಅಂದರೆ ಗ್ರಾಮಸಭೆಗಳಲ್ಲಿ ಈ ಹೌಸ್‌ಲೆಸ್ ಮತ್ತು ಸೈಟ್‌ಲೆಸ್ ಲಿಸ್ಟನ್ನು ಕಳುಹಿಸಿಕೊಟ್ಟಿದ್ದಾರಲ್ಲಾ ಅದು ಸರಿಯಾಗಿಲ್ಲ. Haphazard ಆಗಿದೆ. ಅದನ್ನು ಬದಲಾಯಿಸುವುದಕ್ಕೆ ನಮಗೊಂದು ಅವಕಾಶ ಕೊಡಬೇಕು. ಲೋಕಲ್ ಆಶ್ರಯ ಸಮಿತಿಗೆ ಪವರ್ಸ್ ಕೊಡಬೇಕು. ಈಗ ಇರುವ ಪ್ರಕಾರ ಇಲ್ಲ. ಹಿಂದೆ ನಾವು ಕೊಟ್ಟಂತಹ ಫಲಾನುಭವಿಗಳಿಗೆ ಕೊಡಬೇಕು ಇಲ್ಲ ಅಂದರೆ ಕೈ ಬಿಡಬೇಕು. ಎರಡೂ ಆಗುತ್ತದೆ. ಅಲ್ಲಿನ ಜನ ನೀವು ನಿಮ್ಮ ಕ್ಷೇತ್ರವನ್ನು ಕಳೆದುಕೊಳ್ಳುತ್ತೀರಿ ಅಂತ ಹೇಳುತ್ತಿದ್ದಾರೆ. ಆ ಬಗ್ಗೆ ತಾವು ಅಧಿಕಾರಿಗಳ ಜೊತೆ ಕುಳಿತುಕೊಂಡು ಚರ್ಚೆ ಮಾಡಿ ಸರಿಪಡಿಸದೇ ಹೋದರೆ ನಾವು ಯಾರಿಗೂ ಮನೆಗಳನ್ನು ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ 400 ಕೊಳಚೆ ಪ್ರದೇಶಗಳು ಇವೆ. ಯಾರಿಗೂ ಮನೆಗಳು ಇಲ್ಲ. ಅನೇಕ ಜನ 10x10 ಅಡಿ ಇರುವ ಜಾಗದಲ್ಲಿ 10–15 ಜನ ವಾಸ ಮಾಡುತ್ತಿದ್ದಾರೆ. ಶಿವಾಜಿನಗರದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರು ಇದ್ದಾರೆ. ಅವರೆಲ್ಲಾ ಫುಟ್‌ಪಾತ್‌ನಲ್ಲಿ ಮಲಗಿದ್ದಾರೆ. ಮನೆಗಳು ಇಲ್ಲ. ಅವರು ಗುಡಿಸಲುಗಳನ್ನು ಫುಟ್‌ಪಾತ್ ಮೇಲೆ ಹಾಕಿಕೊಂಡಿದ್ದಾರೆ. ಇಂತಹ ಬೆಂಗಳೂರು ಮಹಾನಗರಕ್ಕೆ ಅನೇಕ ಕ್ಷೇತ್ರಗಳಿಗೆ ಇವತ್ತಿಗೂ ಸಹ ಆಶ್ರಯ ಮನೆಗಳನ್ನು ಕೊಡುತ್ತಿಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳು ಹೇಳಬೇಕಾಗಿದೆ. ಬೆಂಗಳೂರು ಮಹಾನಗರದ ಎಲ್ಲಾ ಕ್ಷೇತ್ರಗಳಿಗೂ ಕೂಡ ಎಲ್ಲಾ ಕೊಳಗೇರಿ ವಾಸಿಗಳಿಗೂ ಕೂಡ ಆಶ್ರಯ ಮನೆಗಳನ್ನು ಕೊಟ್ಟು ಅವರು ವಾಸ ಮಾಡಲು ಅನುಕೂಲ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಫಲಾನುಭವಿಗಳನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಬಾರದು ಅಂತ ಹೇಳಿ ನಿಮ್ಮ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಎಂ.ಡಿ.ಯವರು ಒಂದು ಸುತ್ತೋಲೆಯನ್ನು ಕೊಟ್ಟಿದ್ದಾರೆ. ಯಾರೋ ಒಬ್ಬ, ಇಲ್ಲವೇ ಇಲ್ಲ ಅಂದರೆ ಲ್ಯಾಪ್ಸ್ ಆಗುತ್ತದೆ. ದಯಮಾಡಿ ಫಲಾನುಭವಿಗಳನ್ನು ಬದಲಾವಣೆ ಮಾಡುವುದಕ್ಕೆ ಈಗ ಆಶ್ರಯ ಸಮಿತಿ ಇಲ್ಲ. ಶಾಸಕರನ್ನು ಕೇಳಿ ಅಕಸ್ಮಾತ್ ಯಾರಿಗಾದರೂ ಮನೆ ಇರುವವರಿಗೆ ಅವರ ಗಮನಕ್ಕೆ ಬಂದು ಅವರಿಗೆ ಕೊಡಬಾರದು ಅಂತ ಅವರು ಹೇಳಿದಾಗ ಅದನ್ನು ಬದಲಾವಣೆ ಮಾಡುವುದಕ್ಕೆ ತಾವು ಪರ್ಮಿಟ್ ಮಾಡಿಸಿಕೊಡದೇ ಹೋದರೆ ಹಿಂದೆ ಮಾಡಿದ ಪಾಪವನ್ನು ನಾವು ಅಪ್ರೂವ್ ಮಾಡಿದಂತೆ ಆಗುತ್ತದೆ. ದಯಮಾಡಿ ಅದನ್ನು ಕ್ಲಾರಿಫೈ ಮಾಡಬೇಕು.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೇ, ಹಿಂದೆ ಏನಾಗಿದೆ ಅಂದರೆ ನಮ್ಮ ಕ್ಷೇತ್ರದಲ್ಲಿ 250 ಮನೆ ಕೊಟ್ಟಿದೀರಿ. ಹಿಂದಿನ ಶಾಸಕರು ಯಾರಿಗೆ ಬೇಕೋ ಅವರಿಗೆ ಬರೆದುಕೊಟ್ಟು ಹೋಗಿದ್ದಾರೆ. ನೂರು ಜನ ಮನೆ ಇರುವವರಿಗೆ ಕೊಟ್ಟಿದ್ದಾರೆ. ನಾವು ಅದನ್ನು ನೋಡಿ ಮಾಹಿತಿ ಸಂಗ್ರಹ ಮಾಡಿದ್ದೇವೆ. ಕೆಲವರಿಗೆ ಜಾಗವೇ ಇಲ್ಲ. 250 ಮನೆಗಳಲ್ಲಿ ಸುಮಾರು 100–150 ಮನೆಗಳು ಲ್ಯಾಪ್ಸ್ ಆಗುತ್ತವೆ. ಈಗ ಆಶ್ರಯ ಸಮಿತಿಗಳು ಬರದೇ ಬದಲಾವಣೆ ಮಾಡುವಂತೆ ಇಲ್ಲ ಅಂತ ಹೇಳುತ್ತಾರೆ. ಆದ್ದರಿಂದ ನಮ್ಮ ನಾಯಕರಾದ ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಈಗ

ಇರುವಂತಹ 250 ಮನೆಗಳನ್ನು ಏನು ಕೊಟ್ಟಿದ್ದೀರಿ ಅಲ್ಲಿ ಯಾರಿಗೆ ಮನೆ ಇಲ್ಲವೋ ಅವರಿಗೆ ಮನೆ ಕೊಡುವಂತಾದ್ದು; ಕೆಲವರಿಗೆ ಜಾಗವೇ ಇರುವುದಿಲ್ಲ. ಅಂತಹವರಿಗೆ ಕೊಟ್ಟಿದ್ದಾರೆ. ಯಾರಿಗೆ ನಿವೇಶನ ಇದೆಯೋ ಅಂತಹವರಿಗೆ ಆಶ್ರಯ ಮನೆಯನ್ನು ಕೊಡುವುದಕ್ಕೆ ಬದಲಾವಣೆ ಮಾಡುವುದಕ್ಕೆ ಅಧಿಕಾರವನ್ನು ಆ ಸಮಿತಿಯ ಅಧ್ಯಕ್ಷರಾಗಿರುವಂತಹ ಶಾಸಕರಿಗೆ ಕೊಡಬೇಕಾಗಿರುತ್ತದೆ.

ಅಧ್ಯಕ್ಷರು : ನನ್ನದೊಂದು ಮನವಿ ಏನೆಂದರೆ, ಈಗ ಒಂದು ಗಂಟೆ ಆಯಿತು. 10 ಪ್ರಶ್ನೆ ಮಾತ್ರ ತೆಗೆದುಕೊಳ್ಳುವುದು ಅಂತ ನಿರ್ಣಯ ಮಾಡಿ. ನಾನು ಒಪ್ಪುತ್ತೇನೆ. ಅಲ್ಲದಿದ್ದರೆ ಹೇಗೆ? ಒಂದು ಗಂಟೆಯಲ್ಲಿ ಇನ್ನೂ 9ನೇ ಪ್ರಶ್ನೆ ಮುಗಿದಿಲ್ಲ. ಇನ್ನೂ 6 ಪ್ರಶ್ನೆ ಇವೆ. ನಾನು ಸಭೆಯ ವಿವೇಚನೆಗೆ ಬಿಡುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಈ ಆಶ್ರಯ ಮನೆ ಮತ್ತು ಅಂಬೇಡ್ಕರ್ ಮನೆ ಹಂಚಿಕೆಯಲ್ಲಿ ವಿಪರೀತವಾದ ಒಂದು ಭ್ರಷ್ಟಾಚಾರ ನಡೆದಿರುವುದರಿಂದ ಒಂದೇ ಕುಟುಂಬಕ್ಕೆ 4–5 ಮನೆಗಳನ್ನು ಹಂಚಿಕೆ ಮಾಡಿದ್ದಾರೆ. ಅಥವಾ ಜಾಗ ಇದ್ದವರಿಗೆ ಹಂಚಿಕೆ ಮಾಡಿದ್ದಾರೆ. ಮತ್ತು ಸ್ಥಿತಿವಂತರಿಗೆ ಈ ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಮನೆಗಳನ್ನು ಹಂಚಿರುವಂತಾದ್ದು ಅನೇಕ ಕಡೆಗೆ ಕಂಡು ಬರುತ್ತಿದೆ. ಇನ್ನೊಂದು ಆಶ್ಚರ್ಯಕರವಾದ ಸಂಗತಿ ಅಂದರೆ ಚುನಾವಣೆ ಪೂರ್ವದಲ್ಲಿ ಒಂದು ತಾಲ್ಲೂಕಿಗೆ 1400–1500 ಮನೆಗಳನ್ನು ಕೊಡಬೇಕೆಂದು ಸರ್ಕಾರ ತಿಳಿಸಿದ್ದರೆ 2 ಸಾವಿರ ಎರಡೂವರೆ ಸಾವಿರ, 3 ಸಾವಿರ ಮನೆಗಳಿಗೆ ವರ್ಕ್ ಆರ್ಡರ್‌ಗಳನ್ನು ಅನೇಕ ತಾಲ್ಲೂಕುಗಳಲ್ಲಿ ವಿತರಣೆ ಮಾಡಿದ್ದಾರೆ. ಇದರಲ್ಲಿ ವಿಪರೀತವಾದಂಥ ಭ್ರಷ್ಟಾಚಾರ ಈ ಆಶ್ರಯ ಮನೆಗಳ ವಿತರಣೆಗಳಲ್ಲಿ ಮತ್ತು ಪಟ್ಟಾ ಮತ್ತು ಹಕ್ಕುಪತ್ರಗಳನ್ನು ಕೊಡುವಂತಹ ಸಂದರ್ಭದಲ್ಲಿ ಹೆಚ್ಚು ಕೊಟ್ಟಿರುವಂತಾದ್ದು ಅನೇಕ ತಾಲ್ಲೂಕುಗಳಲ್ಲಿ ಕಂಡು ಬರುತ್ತಿದೆ. ಎಲ್ಲಾ ತಾಲ್ಲೂಕುಗಳಲ್ಲಿ ಸಮಗ್ರವಾದ ತನಿಖೆ ಮಾಡಬೇಕು ಮತ್ತು ತಪ್ಪಿತಸ್ಥರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಸನ್ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರದಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಧರ್ಮೇಗೌಡ ಎಸ್.ಎಲ್. (ಬೀರೂರು) : ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬರುವಂತಹ ಬಿರೂರು ಕ್ಷೇತ್ರದಲ್ಲಿಯೂ ಕೂಡ ಹಿಂದೆ ಇದ್ದ ಶಾಸಕರು ಫಲಾನುಭವಿಗಳನ್ನು ಆಯ್ಕೆ ಮಾಡಿರತಕ್ಕಂಥ ವಿಷಯದಲ್ಲಿ ಬಹಳಷ್ಟು ಜನ ನಿವೇಶನವಿಲ್ಲದಿರುವವರಿಗೆ ಕೊಡುವ ಬದಲಾಗಿ ಮನೆ ಇದ್ದವರಿಗೆ ಮನೆ ಕೊಟ್ಟಿರುವುದು, ಈಗಾಗಲೇ ಆರ್‌ಸಿಸಿ ಮನೆಗಳಿರುವವರಿಗೆ ಮನೆಗಳನ್ನು ಕೊಟ್ಟಿರುವುದು ಬಹುತೇಕ ಕಂಡು ಬಂದಿರುವುದರಿಂದ, ನಮ್ಮ ಸ್ನೇಹಿತರು ಹೇಳಿದಂತೆ ಬದಲಾವಣೆ ಮಾಡುವ ಅಧಿಕಾರವನ್ನು ಆಯಾ ಭಾಗದಲ್ಲಿ ಬರುವ ಆಶ್ರಯ ಸಮಿತಿಯ ಅಧ್ಯಕ್ಷರುಗಳಿಗೆ ಕೊಟ್ಟು ಬದಲಾವಣೆ ಮಾಡದೆ ಹೋದರೆ ಸುಮಾರು ಮನೆಗಳು ಲ್ಯಾಪ್ಸ್ ಆಗುವ ಸಾಧ್ಯತೆಗಳು ಇರುವುದರಿಂದ, ಫಲಾನುಭವಿಗಳಿಗೆ ನೇರವಾಗಿ ಉಪಯೋಗವಾಗಬೇಕೆಂದರೆ, ಈ ವಿಚಾರದಲ್ಲಿ ತಾವು ದಯಮಾಡಿ ನಿರ್ದಿಷ್ಟವಾದ ಕ್ರಮವನ್ನು ಜಾರಿಗೆ ತರದೆ ಹೋದರೆ ತೊಂದರೆಯಾಗುತ್ತದೆಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಇದು ಬಹಳ ಪ್ರಮುಖವಾದ ಪ್ರಶ್ನೆಯಾಗಿದೆ, ಒಂದಲ್ಲ ಒಂದು ಸಮಸ್ಯೆಗಳಿದ್ದಾವೆ ಬಹಳಷ್ಟು ಜನ ಸದಸ್ಯರು ಈ ಬಗ್ಗೆ ಪ್ರಶ್ನೆ ಕೇಳುವುದಕ್ಕೆ ಇಚ್ಛೆಪಡುತ್ತಿದ್ದೀರಿ. ಅದಕ್ಕೋಸ್ಕರ

ಈ ಬಗ್ಗೆ ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಂಡರೆ ಒಳ್ಳೆಯದೆಂದು ನನಗನ್ನಿಸುತ್ತದೆ. ಈ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಏನು ನೀತಿ ನಿರೂಪಿಸಬೇಕೆನ್ನುವುದರ ಬಗ್ಗೆ ವಿಚಾರ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಈಗ ನಗರಪ್ರದೇಶದಲ್ಲಿರುವ ಆಶ್ರಯ ಮನೆಗಳಿಗೆ ಈಗ ಇರುವ ಹಣ ಸಾಲದು ಅದನ್ನು ಹೆಚ್ಚು ಮಾಡಬೇಕೆನ್ನುವ ಒಂದು ಸಲಹೆ ಬಂದಿದೆ. ಈಗಾಗಲೇ ಗ್ರಾಮೀಣ ಪ್ರದೇಶದಲ್ಲಿರುವ ಮನೆಗಳಿಗೆ 20,000 ರೂಪಾಯಿಗಳು ಮತ್ತು ನಗರಪ್ರದೇಶದಲ್ಲಿರುವ ಮನೆಗಳಿಗೆ 25,000 ರೂಪಾಯಿಗಳಿವೆ. ಆ 25,000 ಸಾವಿರ ರೂಪಾಯಿಗಳನ್ನು ಹೆಚ್ಚು ಮಾಡಬೇಕೆನ್ನುವ ಪ್ರಸ್ತಾವವನ್ನು ನಾವು ಕೇಂದ್ರ ಸರ್ಕಾರಕ್ಕೂ ಕೂಡ ಕಳುಹಿಸಿಕೊಡುತ್ತೇವೆ. ಅಲ್ಲಿಂದ ಆಶ್ರಯ ಮನೆಗಳು ನಮ್ಮದೇ ಆಗಿರುವ ರಾಜ್ಯ ಸರ್ಕಾರದ ನಿಯಮ, ಇಂದಿರಾ ಆವಾಸ್ ಮತ್ತು ಅಂಬೇಡ್ಕರ್ ಮನೆಗಳ ರೀತಿಯಲ್ಲಿ ಮಾಡಬೇಕಾಗುತ್ತದೆ. ನಮ್ಮ ಸಂಪನ್ಮೂಲಗಳ ಇತಿಮಿತಿಗಳಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಈಗ ಇಷ್ಟೆಲ್ಲಾ ಆಗಿದ್ದರೂ ಕೂಡ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಮೇಲೆ ಇರುವ ಭಾರ ಸುಮಾರು 700 ಕೋಟಿ ರೂಪಾಯಿಗಳು. 10,000 ರೂಪಾಯಿಗಳ ಸಾಲ, 10,000 ರೂಪಾಯಿಗಳನ್ನು ಉಚಿತವಾಗಿ ಅಲ್ಲಿನ ಫಲಾನುಭವಿಗಳಿಗೆ ಕೊಡುವುದು ಅಷ್ಟಾದರೂ ಕೂಡ 700 ಕೋಟಿ ರೂಪಾಯಿಗಳ ಭಾರವಿದೆ. 10,000 ರೂಪಾಯಿಗಳ ಸಾಲದ ಮರುಪಾವತಿಗಳ ವಿಚಾರದಲ್ಲಿ ಎಷ್ಟೇ ನಿಯಮಗಳನ್ನು ನಾವು ಬಿಗಿ ಬಂದೊಬಸ್ತ್ ಮಾಡಿ, ಅವರಿಗೆ ದಿವಸಕ್ಕೆ 5 ರೂಪಾಯಿಗಳನ್ನು ಕಟ್ಟಿ ಎನ್ನುವ ಮಾತನ್ನು ಹೇಳಿ, ನಿಮ್ಮ ಗ್ರಾಮಪಂಚಾಯಿತಿಯ ಕಾರ್ಯದರ್ಶಿಯವರಲ್ಲಿ ತಿಂಗಳಿಗೆ 150 ರೂಪಾಯಿಗಳನ್ನು ಕಟ್ಟಿ ಎಂದು ಹೇಳಿದರೂ ಕೂಡ ವಸೂಲಾತಿಯಾಗಿರುವುದು ಶೇಕಡ 10ಕ್ಕಿಂತ ಕಮ್ಮಿ. ಈ ಯೋಜನೆಗಳು ಮುಫತ್ತಾಗಿ ಬರುತ್ತವೆಂದು ಅವರು ವಿವೇಚನೆ ಮಾಡುತ್ತಾರೆ. ಇದರಲ್ಲಿ ಪಾಲ್ಗೊಳ್ಳುವಿಕೆ ಸಂಸ್ಕೃತಿಗೆ ಅವರು ಒಳಗಾಗಬೇಕಾಗುತ್ತದೆ. ಯಾರು ಫಲಾನುಭವಿಗಳಾಗಿರುತ್ತಾರೆ ಅವರೂ ಕೂಡ ನಮ್ಮ ಈ ಕಾರ್ಯಕ್ರಮದಲ್ಲಿ ನಾನು ಪಾಲ್ಗೊಂಡಿದ್ದೇನೆ. ನನ್ನ ಶ್ರಮ ಮತ್ತು ಹಣ ಅದರಲ್ಲಿ ಸೇರಿದೆ ಎನ್ನುವುದೊಂದೇ ಅಲ್ಲ. ಸಂಪನ್ಮೂಲಗಳ ಇತಿಮಿತಿಗಳಲ್ಲಿ ಹೆಚ್ಚು ಜನರಿಗೆ ನಾವು ಅನುಕೂಲಗಳನ್ನು ಕಲ್ಪಿಸಿಕೊಡಬೇಕಾಗಿದ್ದರೆ ಈ ರೀತಿಯಾದ ಪಾಲ್ಗೊಳ್ಳುವಿಕೆ ಮತ್ತು ಅವರು ಕಟ್ಟಲೇಬೇಕಾದ ಹಣವನ್ನು ಕೊಡಲೇ ಬೇಕಾಗುತ್ತದೆ. ನೀವು ಈಗ ಹೇಳಿದಂತೆ ಸರ್ಕಾರ ಸಿದ್ಧವಾಗಿದೆ. ಶೇಕಡ 10ಕ್ಕಿಂತ ಹೆಚ್ಚು ವಸೂಲಾತಿ ಆದರೆ, ದಿನಕ್ಕೆ 5 ರೂಪಾಯಿ ಒಬ್ಬ ಕಾರ್ಮಿಕನಿಗೆ ದೊಡ್ಡದಾಗಿರುವುದೇನಲ್ಲ, ಕೆಲವು ಜಿಲ್ಲೆಗಳಲ್ಲಿ, ಊರುಗಳಲ್ಲಿ ಬಹಳ ಒಳ್ಳೆಯ ರೀತಿಯಾಗಿ ಹಣವನ್ನು ಕಟ್ಟಿರುವವರಿದ್ದಾರೆ. ಸರ್ಕಾರಿ ಸಾಲವೆಂದರೆ ಬೇರೆ ಬೇರೆ ಕಾರಣಗಳಿಗಾಗಿ ಹಣ ಕಟ್ಟುತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಜಯಪ್ರಕಾಶ್ ಹೆಗ್ಡೆಯವರದ್ದು ಅದೇ ಪ್ರಶ್ನೆ ಇದೆ. ಅದಕ್ಕೂ ಸೇರಿಸಿ ಹೇಳಿಬಿಡಿ ಸಮಯ ಉಳಿಯುತ್ತದೆ ಎಂದು ಹೇಳುವುದಕ್ಕೆ ನಿಂತಿದ್ದೇನೆ. ನೀವು ಮುಂದಿನ ಪ್ರಶ್ನೆಯನ್ನು ನೋಡಿ, ಅದೇ ಪ್ರಶ್ನೆ ಪ್ರಿಂಟ್ ಆಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ರಿಜಿಸ್ಟ್ರೇಷನ್ ಮಾಡುವ ಕಾರ್ಯಕ್ರಮವನ್ನು ಸ್ವಲ್ಪ ಮುಂದುವರೆಸಿ ಎಂದರು. ಕಳೆದಬಾರಿ ಇದನ್ನು ಮುಂದುವರೆಸಿದ್ದರು, ಜುಲೈ 31ಕ್ಕೆ ಇದನ್ನು ಮುಂದುವರೆಸಬೇಕೆಂದು ಯೋಚನೆ ಮಾಡಿದೆವು, ಅದೂ ಕೂಡ ತಡವಾಗುತ್ತದೆಂದರೆ, ಆಗಸ್ಟ್ 30ನೇ ತಾರೀಖಿನವರೆಗೆ ನಾವು ಮುಂದುವರೆಸುವುದಕ್ಕೆ ತಯಾರಿದ್ದೇವೆ. 2003–04ನೇ ಸಾಲಿನಲ್ಲಿರುವ ಹಣವನ್ನು ಬಿಡುಗಡೆ ಮಾಡಿದ್ದೇವೆ. ಆದರೆ ಅಲ್ಲಿ ಬೇರೆ ಬೇರೆ ಕಾರಣಗಳಿಂದ, ಅಲ್ಲಿ ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿರುವ ವಿಚಾರವನ್ನೂ ಕೂಡ ಪ್ರಸ್ತಾಪ ಮಾಡಲಾಗಿದೆ. ಅನರ್ಹ ಫಲಾನುಭವಿಗಳನ್ನು ಯಾದಿಯಿಂದ ಕೈಬಿಡಬೇಕೆಂದು ನಿಯಮವಿದೆ, ಆದರೆ ಅವರೇ ಆಯ್ಕೆ ಮಾಡುವಂತಹದ್ದಿಲ್ಲ. ಅದು ಲ್ಯಾಪ್ಸ್ ಆಗಿ ಹೋಗುವುದಿದೆ. ಆದುದರಿಂದ ಸರ್ಕಾರ ಈ ಬಗ್ಗೆ ಒಂದು ಯೋಚನೆ ಮಾಡಿ ಆ ರೀತಿಯಾಗದಂತೆ, ಆಯಾ ಸಾಲಿಗೆ ಸಂಬಂಧಪಟ್ಟ ಮನೆಗಳೆಂದು ನಮ್ಮಲ್ಲಿರುವ ನಿಯಮಗಳಿಗೆ ಅನುಗುಣವಾಗಿ ಇದನ್ನು ಮಾಡಬೇಕಾಗುತ್ತದೆ. ಏತಕ್ಕೆ ಈ ನಿರ್ಧಾರವನ್ನು ಹೌಸಿಂಗ್ ಕಾರ್ಪೋರೇಷನ್‌ರವರು ತೆಗೆದುಕೊಂಡಿದ್ದಾರೆಂದರೆ, ನಮ್ಮ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗುವುದೇ ಇಲ್ಲ. ಕೆಲವು ಬದಲಾವಣೆಯಾದ ತಕ್ಷಣ, ಊರಿನಲ್ಲಿ ಬಿನ್ನಾಭಿಪ್ರಾಯಗಳು ಬಂದಾಕ್ಷಣ, ಎಂಎಲ್‌ಎಗಳು ಬದಲಾವಣೆಯಾದ ಸಂದರ್ಭಗಳಲ್ಲಿ ಅನರ್ಹ ಫಲಾನುಭವಿಗಳಿದ್ದಾರೆಂದು ಗೊತ್ತಾಗಿದ್ದರೂ ಕೂಡ ಕನಿಷ್ಠ ಪಕ್ಷ ನಿಮಗೆ ಆ ಮನೆಗಳು ನಿಮಗೆ ಲಭ್ಯವಿಲ್ಲವೆನ್ನುವುದು ಬಂದಾಗ, ಆ ಗುರಿಯನ್ನು ಸಾಧನೆ ಮಾಡಿ ಹೆಚ್ಚಿನ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ವ್ಯಾಜ್ಯಕ್ಕೆ ಎಡೆಮಾಡಿಕೊಡುತ್ತದೆ. ಅನೇಕ ಕಡೆ ಶಾಸಕರು ಸಮಯ ಕೊಟ್ಟಿಲ್ಲವೆನ್ನುವ ಕಾರಣಕ್ಕಾಗಿ ಆಶ್ರಯ ಸಮಿತಿಯ ಸಭೆಗಳು 8–10 ಭಾರಿ ಮುಂದಕ್ಕೆ ಹೋಗಿರುವ ಉದಾಹರಣೆಗಳಿವೆ. ನಿಗದಿತ ಸಮಯದಲ್ಲಿ ಆಶ್ರಯ ಸಮಿತಿಯನ್ನು ಕರೆಯುತ್ತಾರೆ, ಆದರೆ ಆ ಸಮಯದಲ್ಲಿ ಬೇರೆ ಬೇರೆ ಅನ್ಯ ಕಾರಣಗಳಿರುತ್ತವೆ, ಆ ಕಾರಣಕ್ಕಾಗಿ ಮುಂದಕ್ಕೆ ಹೋಗಿರುವ ಉದಾಹರಣೆಗಳಿರುವುದರಿಂದ ಈಗ ಮುಂದೆ ಹೋಗಬಾರದು ಆ ಗುರಿಯನ್ನು ಸಾಧಿಸಬೇಕೆನ್ನುವ ಕಾರಣಕ್ಕಾಗಿ ಇದನ್ನು ಮಾಡಿದ್ದೇವೆ. ಈಗಾಗಲೇ 24 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಇದು ಜುಲೈ ಮತ್ತು ಆಗಸ್ಟ್ ತಿಂಗಳವರೆಗೆ; ಮಾನ್ಯ ವಿರೋಧಪಕ್ಷದ ನಾಯಕರು ಇದಕ್ಕೆ ಹಣ ಬಿಡುಗಡೆ ಮಾಡಬೇಕೆಂದು ಕೇಳಿದರು, ಹಣವಿದೆ ಎನ್ನುವ ಮಾತನ್ನೂ ಕೂಡ ಹೇಳಿದ್ದೇನೆ. 24 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಕಟ್ಟುವಂತಹ ಎಲ್ಲಾ ಈ ಮನೆಗಳನ್ನು ಕಟ್ಟುವ ಕಾರ್ಯಕ್ರಮಕ್ಕೆ ಆ ಹಣವಾಗುತ್ತದೆ ಮತ್ತೆ ಅಗತ್ಯವಿದ್ದಾಗ ನಾವು ಹಣವನ್ನೂ ಕೂಡ ಮಂಜೂರಾತಿ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಹೆಚ್. ಆಂಜನೇಯರವರು ತಮ್ಮ ಪ್ರಶ್ನೆಯನ್ನು ಕೇಳುವುದು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕೆ. ಜಯಪ್ರಕಾಶ್ ಹೆಗ್ಡೆಯವರ ಪ್ರಶ್ನೆಯನ್ನು ಕರೆಯುವುದು, ಮಾನ್ಯ ಆಂಜನೇಯರವರನ್ನು ಕರೆದಿರುವುದು ಅನುಕ್ರಮಣಿಕೆಯಲ್ಲಿ ಬೇರೆ ಇದೆ. ಅದಕ್ಕಾಗಿ ನನಗೆ ಈ ಗೊಂದಲವಾಗುತ್ತಿದೆ.

ಅಧ್ಯಕ್ಷರು : ಮಾನ್ಯ ಆಂಜನೇಯರವರೇ ತಮ್ಮ ಪ್ರಶ್ನೆಯನ್ನು ನಂತರ ಕರೆಯಲಾಗುವುದು. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಪ್ರಶ್ನೆ ಕೇಳುವುದು.